

# ಸಾರಿ ಇಲ್ಲದ **ರುಚಿ ಕಲ್ಲಣಬೆ**





ಚಿತ್ರ– ಲೇಖನ:

**ದೇವರು ಆರ್. ಭಟ್ಟ**

ನಮ್ಮದು ಮಲೆನಾಡು ಪ್ರದೇಶ. ಕಳೆದ ಭಾನುವಾರ ನಮ್ಮೂರಿನ ಬುಡಕಟ್ಟು ಜನಾಂಗದವರ ಮನೆಗೆ ಬಂದ ನೆಂಟರು ರಸ್ತೆ ಬದಿಯಲ್ಲಿ ಸೊಂಟ ಬಗ್ಗಿಸಿ ಎಲೆ ದರಕುಗಳನ್ನು ಬದಿ ಸರಿಸಿ ಏನನ್ನೋ ಹುಡುಕುತ್ತಿದ್ದರು. ಏನೋ ಕಳೆದುಕೊಂಡಿರಬೇಕು ಎಂದುಕೊಂಡೆ. ಸಮೀಪ ಹೋಗಿ ಕೇಳಿದಾಗ ಕಲ್ಲಣಬೆ ಹುಡುಕುತ್ತಿದ್ದೇವೆ ಎಂದರು. ಅಣಬೆಗಳೆಲ್ಲ ಬಗ್ಗಿ ಹುಡುಕುವಷ್ಟು ಸೂಕ್ಷ್ಮವಾಗಿರುತ್ತವೆಯೇ ಎಂಬ ಕುತೂಹಲ ನನಗೆ. ಕೈಯಲ್ಲಿದ್ದ ಅಣಬೆ ತೋರಿಸಿದರು. ಅಕ್ಷರಶಃ ಅಜ್ಞಾತವಾಗಿರುವ ಅಣಬೆಯೊಂದರ ಪರಿಚಯವಾಯಿತು.

ಈ ಅಣಬೆಗಳು ಕಲ್ಲು ಮಿಶ್ರಿತ ಮಣ್ಣಿರುವ ಜಾಗದಲ್ಲಿ ಕಸ ಕಡ್ಡಿಗಳ ನಡುವೆ ಒಂದೆರೆಡು ಒಟ್ಟೊಟ್ಟಿಗೆ ಹುಟ್ಟಿರುತ್ತವೆ. ಭೂಮಿಯಲ್ಲಿಯೇ ಅವಿತುಕೊಂಡು ಮಣ್ಣಿನ ಮಧ್ಯೆ ಹಣಕಿ ಮೇಲೆ ನೋಡುತ್ತಿರುತ್ತವೆ. ಸುಮಾರಾಗಿ ಅಡಿಕೆ ಗಾತ್ರ ಹೊಂದಿರುವ ಅಣಬೆ ಕಲ್ಲಿನಂತೆ ಕಾಣುವುದರಿಂದ ಗುರುತಿಸುವುದೇ ಕಷ್ಟ. ಹೆಚ್ಚೆಂದರೆ ನಾಲ್ಕಾರು ದಿನಗಳ ಕಾಲ ಬದುಕಿ ನಂತರ ಕೆಟ್ಟು ಕಪ್ಪಾಗಿ ಒಡೆದು ಹೋಗಿರುತ್ತವೆ. ಅಣಬೆಯ ಹೊರ ಮೈ ಚಿಪ್ಪಿನಂತೆ ಗಡುಸಾಗಿರುತ್ತದೆ. ಒಳಗಡೆ ಒತ್ತೊತ್ತಾಗಿ ಇರುವ ನಾಲ್ಕಾರು ಬಿಳಿಯ ತುಣುಕುಗಳು ತುಂಬಿಕೊಂಡಿರುತ್ತವೆ. ಹುಡುಕುವುದು ಇಷ್ಟೊಂದು ಕಷ್ಟವಾದರೂ ಇದರ ರುಚಿಗೆ ಬೇರಾವ ಅಣಬೆಯೂ ಸಾಟಿ ಇಲ್ಲವಂತೆ. ಗಟ್ಟಿಯಾದ ಹೊರ ಕವಚವನ್ನು ಕಲ್ಲಿಗೆ ಉಜ್ಜಿ ನೀರಿನಲ್ಲಿ ತೊಳೆದು ತೆಳುವಾಗಿ ಕತ್ತರಿಸಿ ಪಲ್ಲೆ ಅಥವಾ ಸಾಂಬಾರು ಮಾಡಿ ತಿಂದಾಗಲೇ ಕಷ್ಟಪಟ್ಟು ಹುಡುಕಿದ್ದರ ಬೆಲೆ ಗೊತ್ತಾಗುವುದು.